ಡಿವಿಜನಲ್ ಆಫೀಸ್ ಇದ್ದದ್ದು ಅದು ಗುಲ್ಬರ್ಗಕ್ಕೆ ಹೋಯಿತು. ಡಿ.ಐ.ಜಿ. ಆಫೀಸ್ ದಾವಣಗೆರೆಗೆ ಹೋಯಿತು, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಅದು ಕೂಡಾ ದಾವಣಗೆರೆಗೆ ಹೋಯಿತು. ನಮ್ಮಲ್ಲಿರತಕ್ಕಂಥ ಎಲ್ಲಾ ಆಫೀಸ್‌ಗಳನ್ನು ಕೂಡ ತೆಗೆದುಹಾಕಿಬಿಡಿ. ಆಗ ಸಂತೋಷಪಡುತ್ತೇವೆ. ಈ ರೀತಿಯಲ್ಲೆಲ್ಲಾ ನಮ್ಮ ಬಳ್ಳಾರಿಗೆ ಒಹಳ ಅನ್ಯಾಯ ಮಾಡಿದ್ದಾರೆ. ನಮ್ಮಲ್ಲಿರುವ ಮೈನಾರಿಟೀಸ್ ನವರು ಒಂದು ಹಾದಿಮಾಹಲ್ ಬೇಕು ಎಂದು ಕೇಳಿದ್ದರು. ಅದಕ್ಕೆ ಸಹ ಒಂದು ರಾಜಕೀಯ ಮಾಡಿ ಯಾರು ಕೂಡಾ ಹೋಗದೆ ಇದ್ದ ಜಾಗದಲ್ಲಿ ಅದನ್ನು ಹಾಕಿದ್ದಾರೆ. ಅಂಥ ಸ್ಥಳದಲ್ಲಿ ಅದನ್ನು ಕೊಟ್ಟಿದ್ದಾರೆ. ಅದನ್ನು ಸೆಂಟರ್ ಪ್ಲೇಸ್‌ನಲ್ಲಿ ಕೊಡಿ ಎಂದು ಕೇಳಿದ್ದೆವು. ಅದಕ್ಕೆ ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳನ್ನು ಕೇಳಿದಾಗ ಅದಕ್ಕೆ ಅವರು ಲ್ಯಾಂಡ್ ಥೇಂಜ್ ಇದೆ ಎಂದು ಹೇಳಿಬಿಟ್ಟು ನಾಲ್ಕು ವರ್ಷ ಆಗಿದೆ ಇಪತ್ತಿನವರೆಗೂ ಏನೂ ಮಾಡುತ್ತಿಲ್ಲ. ಇದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಬೇಕು. ಇನ್ನು ನಮ್ಮ ಬಳ್ಳಾರಿಯಲ್ಲಿ ತೆಲುಗು ಮಾತನಾಡುವವರು, ಮುಸ್ಲಿಂ ಜನಗಳೂ ಕೂಡಾ ಸಾಕಷ್ಟು ಮಂದಿ ಇದ್ದಾರೆ ; ಇವರುಗಳ ಬಗ್ಗೆ ನಮ್ಮ ಸರ್ಕಾರದವರು ಏತಕ್ಕೆ ಸೆಪರೇಟ್ ಆಗಿ ನೋಡುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ನಮ್ಮ ಬಳ್ಳಾರಿಗೆ ನೀವು ಏನು ಕೊಡುಗೆಯನ್ನು ಕೊಡುತ್ತೀರಿ, ಅದನ್ನಾದರೂ ಸ್ವಲ್ಪ ಹೇಳಬೇಕು. ನಮ್ಮ ಬಳ್ಳಾರಿಗೆ ಏನಾದರೂ ಇಂಪ್ರೂವ್‌ಮೆಂಟ್ಸ್ ಮಾಡ ಬೇಕಾದಾಗ ಆಯವ್ಯಯದಲ್ಲಿ ಅದಕ್ಕೆ ಸೂಕ್ತ ಆದ್ಯತೆಯನ್ನು ಕೊಡಬೇಕೆಂದು ಹೇಳಿ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಪ್ರಸ್ತಾವ

ರಾಜ್ಯದ ವಿದ್ಯುಚ್ಛಕ್ತಿ ಸಮಸ್ಯೆಗಳ ಪರಿಹಾರ ಸೂಚಕ ಸಮಿತಿ ರಚನೆ

ಅಧ್ಯಕ್ಷರು.—ಇಲ್ಲಿ ಒಂದು ಪ್ರಸ್ತಾವ ಇದೆ. ಆ ಪ್ರಸ್ತಾವ ಏನೆಂದರೆ "ರಾಜ್ಯದಲ್ಲಿ ತಲೆದೋರಿರುವ ವಿದ್ಯುಚ್ಛಕ್ತಿ ಕಡಿತ, ಲೋಡ್ ಶೆಡ್ಡಿಂಗ್ ಹಾಗೂ ವಿದ್ಯುಚ್ಛಕ್ತಿ ಇಲಾಖೆಯು ಇತರೆ ವ್ಯವಹಾರಗಳಿಂದ ರಾಜ್ಯದ ಜನತೆ ಹಾಗೂ ವಿಶೇಷವಾಗಿ ರೈತರಿಗೆ ಉಂಟಾಗಿರುವ ಸಮಸ್ಯೆಯನ್ನು ಪರಿಶೀಲಿಸಿ ಸದನಕ್ಕೆ ಏನೇ ವಿಪ್ರಿಲ್. ೧೯೮೯ರೊಳಗಾಗಿ ವರದಿಯನ್ನು ಒಪ್ಪಿಸಲು ಈ ಕೆಳಕಂಡ ಸದಸ್ಯರನ್ನು ಒಳಗೊಂಡ "ರಾಜ್ಯ ವಿದ್ಯುಚ್ಛಕ್ತಿ ಸಮಸ್ಯೆಗಳ ಪರಿಹಾರ ಸೂಚಕ" ಸದನದ ಸಮಿತಿಯನ್ನು ರಚಿಸಲು ಈ ಸದನವು ನಿರ್ಣಯಿಸುತ್ತದೆ.

ಶ್ರೀಯುತರುಗಳಾದ.—

೧.	ಲಕ್ಷ್ಮೀನರಸಿಂಹಯ್ಯ	:	ಅಧ್ಯಕ್ಷರು
೨.	ಕಲ್ಯಾಣರಾವ್ ಮೊಳಕೇರಿ	;	ಸದಸ್ಯರು
೩.	ರೇವಣ ಸಿದ್ದಯ್ಯ	;	ಸದಸ್ಯರು
೪.	ಹೆಚ್.ಸಿ. ಮಹದೇವಪ್ಪ	;	ಸದಸ್ಯರು
೫.	ಕೆ. ಮಲ್ಲಪ್ಪ	;	ಸದಸ್ಯರು
೬.	ಐ.ಬಿ. ಶಂಕರ್	;	ಸದಸ್ಯರು
೭.	ಎಂ. ವೀರಪ್ಪಮೊಯಿಲಿ	;	ಸದಸ್ಯರು
೮.	ಜಿ.ಎಸ್. ಆಚಾರ್	;	ಸದಸ್ಯರು
೯.	ಮಲ್ಲಿಕಾರ್ಜುನ ಎಂ. ಖರ್ಗೆ	;	ಸದಸ್ಯರು

೧೦ ಸಿ. ಬೈರೇಗೌಡ : ಸದಸ್ಯರು

೧೧. ವೈ.ಕೆ, ರಾಮಯ್ಯ ; ಸದಸ್ಯರು

೧೨. ಚಂದ್ರಕಾಂತ್ ಬೆಲ್ಲದ್ ; ಸದಸ್ಯರು

೧೩. ಎಂ.ಎಸ್. ಕೃಷ್ಣನ್ : ಸದಸ್ಯರು

೧೪. ಆರ್. ವೆಂಕಟರಾಮಯ್ಯ ; ಸದಸ್ಯರು

೧೫. ಬಿ.ಎಸ್. ಯಡಿಯೂರಪ್ಪ ; ಸದಸ್ಯರು

೧೬. ಎಸ್.ಎಸ್. ಕಡಪಟ್ಟಿ ; ಸದಸ್ಯರು

(ಪ್ರಸ್ತಾಪವು ಸರ್ವಾನುಮತದಿಂದ ಅಂಗೀಕೃತವಾಗಿದೆ.)

ಅಧ್ಯಕ್ಷರು.—ಸದನವನ್ನು ಇಂದು ಮುಕ್ತಯಗೊಳಿಸಿ ಸೋಮವಾರ ೯–೦೦ ಗಂಟೆಗೆ ಪುನಃ ಸೇರುವುದು.

(ಸದನವು ೫-೦೫ ಗಂಟೆಗೆ ಮುಕ್ತಾಯಗೊಂಡಿತು ಮುತ್ತೆ ದಿನಾಂಕ ; ೨೭–೩–೧೯೮೯ ರಂದು ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)